

ಕೇದಾರಮಠದ ಎದುರು ಕಲಾವಿದರು

# ಹಿಮಾಲಯದಲ್ಲಿ ಹಾಡು ಕುಣಿತ



ಲಡಾಕಿನ ಸಂಗೀತ ಕಲಾವಿದ

**ಹಿಮಾಲಯದ ಏಕಾಂತ, ಚಳಿ, ಪಶುಪಾಲನೆ, ಹೊಲಗೆಲಸಗಳಿಗೂ ಹಾಡಿನ ಆಶಯ ಮತ್ತು ರಾಗಗಳಿಗೂ ಸಂಬಂಧ ಇದ್ದಂತಿದೆ. ವ್ಯಕ್ತಿಗಳು ಹಾಡಿದರೂ ಸಮುದಾಯದ ಅಂತರಂಗವನ್ನು ಕನ್ನಡಿಸುವ ಈ ಹಾಡುಗಳು, ಜನರ ಕನಸು, ಆಶೋತ್ತರದ ಪ್ರತಿಬಿಂಬಗಳಾಗಿವೆ.**

■ ರಹಮತ್ ತರೀಕೆರೆ



ನಾವು ಗೆಳೆಯರು ಕೆಲವು ವರ್ಷಗಳ ಹಿಂದೆ ಹಿಮಾಲಯದ ಚಂದ್ರಖಾನಿ ಪಾಸಿಗೆ ಚಾರಣ ಹೋಗಿದ್ದೆವು. ಹಾದಿಯಲ್ಲಿ ಸಿಗುವ ಸೇಬುತೋಟಗಳಿಗೆ ಪ್ರಸಿದ್ಧವಾದ ಪುಲಾನ್ ಎಂಬ ಹಳ್ಳಿಯಲ್ಲಿ ಒಂದು ರಾತ್ರಿ ವಸ್ತಿ ಮಾಡಿದ್ದೆವು. ಚೆನ್ನಾಗಿ ದೇಹ ದಣಿದಿತ್ತು. ಯಮನಿದ್ದೆ. ಬೆಳಗಿನ ಜಾವ ಎಚ್ಚರವಾದಾಗ ಎರಡು ನಾದಗಳು ಕಿವಿಯ ಮೇಲೆ ಬಿದ್ದವು. ಒಂದು, ಪಾರ್ವತಿ ಹೊಳೆಯ ಅಬ್ಬರದ ಶೃತಿ. ಎರಡು, ಸೇಬುಗಿಡಗಳಲ್ಲಿ ಹಾಡುತ್ತಿದ್ದ ಪಿಕಳಾರಗಳದ್ದು.

ಕುಲು ಕಣಿವೆಯಲ್ಲಿ ಇದ್ದಷ್ಟೂ ದಿನ ಬೆಳಗಿನ ಜಾವ ಹೊಳೆಪಕ್ಕದ ಗಿಡಗಂಟೆಗಳಿಂದ ಇವುಗಳ ಹಾಡಿಕೆ ಆಲಿಸಬಹುದು. ಉತ್ತರಕಾಶಿಯಲ್ಲಿ ಗಂಗೆಯ ಪಕ್ಕದಲ್ಲಿದ್ದ ನಮ್ಮ ಖೋಲಿಯ ಹಿಂದಿನ ಸೇಬಿನ ಗಿಡದಲ್ಲಿ ಎರಡು ಪಿಕಳಾರಗಳು ಮಾತುಕತೆ